ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027.India
Tel : 080-22221321 / 25
Website : www.ksrtc.in

ಸಂಖ್ಯೆ/ಕರಾಸಾ/ಕೇಕ/ಆಡಳಿತ/ಎ1-15/ 254 /2021-22 ದಿನಾಂಕ:26-07-2021

## ಆ ದೇ ಶ

ವಿಷಯ: ಕ.ರಾ.ರ.ಸಾ.ನಿಗಮದಲ್ಲಿ ಅಧಿಕಾರಿ/ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು ಮುಂದುವರೆಸುವ ಕುರಿತು.

ಉಲ್ಲೇಖ:1.ಸುತ್ತೋಲೆ ಸಂಖ್ಯೆ:1666 ದಿನಾಂಕ:06.02.2020
2.ಕರಾಸಾ/ಕೇಕ/ಆಡಳಿತ/ಎ1-11/1225/2019-20ದಿನಾಂಕ:13.03.2020
3.ಸಂಖ್ಯೆ:ಕರಾಸಾ/ಕೇಕ/ಆಡಳಿತ/ಎ1-15/69/2021-22ದಿನಾಂಕ:22.04.2021
4.ಸಂಖ್ಯೆ:ಟಿಡಿ 16 ಟಿಸಿಎಸ್ 2021 ದಿನಾಂಕ:05.07.2021
5.ಮಾನ್ಯ ನಿರ್ದೇಶಕರು (ಸಿ&ಪ), ಕ.ರಾ.ರ.ಸಾ.ನಿಗಮ ರವರ ಆದೇಶ ದಿನಾಂಕ: 23/07/2021.

+++++

ಕ.ರಾ.ರ.ಸಾ.ನಿಗಮದಲ್ಲಿ ಅಧಿಕಾರಿ/ಸಿಬ್ಬಂದಿಗಳು ಕೇಂದ್ರ ಕಚೇರಿ ಹಾಗೂ ವಿಭಾಗೀಯ ಕಚೇರಿಗಳಲ್ಲಿ ಉಲ್ಲೇಖ:01ರ ಸುತ್ತೋಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವಾಗ ಕಚೇರಿಯ ಮುಖ್ಯದ್ವಾರದಲ್ಲಿರುವ ಬಯೋಮೆಟ್ರಿಕ್ ಯಂತ್ರದಲ್ಲಿ ಹಾಜರಾತಿಯನ್ನು ನಮೂದಿಸಲು ನಿರ್ದೇಶನವಿದ್ದು, ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೊರೊನಾ ವೈರಸ್ 2ನೇ ಅಲೆಯಿಂದಾಗಿ ಕ.ರಾ.ರ.ಸಾ.ನಿಗಮದಲ್ಲಿ ಅಧಿಕಾರಿ/ನೌಕರರ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಕಚೇರಿಗಳ ಮುಖ್ಯದ್ವಾರದಲ್ಲಿರುವ ಬಯೋಮೆಟ್ರಿಕ್ ಯಂತ್ರದಲ್ಲಿ ಅಧಿಕಾರಿ/ಸಿಬ್ಬಂದಿಗಳು ಹಾಜರಾತಿಯನ್ನು ನಮೂದಿಸುವುದನ್ನು ಉಲ್ಲೇಖ:03ರ ಆದೇಶದನ್ವಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಪ್ರಸ್ತುತ, ಉಲ್ಲೇಖ:04 ರಲ್ಲಿನ ರಾಜ್ಯ ಸರ್ಕಾರದ ಆದೇಶದನ್ವಯ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪುನರಾರಂಭಿಸುವಂತೆ ಹಾಗೂ ಎಲ್ಲಾ ಬಯೋಮೆಟ್ರಿಕ್ ಯಂತ್ರಗಳ ಪಕ್ಕದಲ್ಲಿ ಸೂಕ್ತ ಸ್ಯಾನಿಟೈಸರ್ ವ್ಯವಸ್ಥೆ ಕಲ್ಪಿಸಲು ಕ್ರಮಕೈಗೊಳ್ಳುವಂತೆ ತಿಳಿಸಲಾಗಿರುವುದರಿಂದ ಕ.ರಾ.ರ.ಸಾ. ನಿಗಮದಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಬಯೋಮೆಟ್ರಿಕ್ ಹಾಜರಾತಿಯನ್ನು ಪುನರಾರಂಭಿಸಲಾಗಿದೆ.

ಸಂಬಂಧಪಟ್ಟವರೆಲ್ಲರೂ ಮೇಲಿನ ನಿರ್ದೇಶನಗಳನ್ನು ತಪ್ಪದೆ ಪಾಲಿಸಲು ತಿಳಿಸಲಾಗಿದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು(ಸಿಬ್ಬಂದಿ)

ಪ್ರತಿ ಮಾಹಿತಿಗಾಗಿ:
1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಕ.ರಾ.ರ.ಸಾ.ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರ ಮಾಹಿತಿಗಾಗಿ
3. ಮಾನ್ಯ ನಿರ್ದೇಶಕರು (ಸಿ:ಪ)/(ಭ:ಜಾ),ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ.

..02

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು/ ಕಾರ್ಯವ್ಯವಸ್ಥಾಪಕರು /ಪ್ರಾಂಶುಪಾಲರು/ಕಾರ್ಯನಿರ್ವಾಹಕ ಅಭಿಯಂತರರು/ಮುಖ್ಯ ವೈದ್ಯಾಧಿಕಾರಿಗಳು/ಮುದ್ರಣ & ಲೇಖನ ಸಾಮಗ್ರಿ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ /ವಾ.ಕ.ರ.ಸಾ.ಸಂಸ್ಥೆ / ಕ.ಕ.ರ.ಸಾ.ಸಂಸ್ಥೆ ರವರಿಗೆ.
6. ಮುಖ್ಯ ಭದ್ರತಾ & ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ, ಆದೇಶವನ್ನು ಕೇಂದ್ರ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಈ ಕಚೇರಿಗೆ ಮಾಹಿತಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕ, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ, ಆದೇಶವನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಗ್ರಾಣ & ಖರೀದಿ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ.
10. ಪ್ರಧಾನ ಕಚೇರಿ ಪತ್ರ ಕಡತ.